**ಓ ಎಸ್ ನಂಃ 455/2014**

**ಪಿ. ಡಬ್ಲ್ಯೂ ಃ 3**

**ದಿಃ 13.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಜಿ.ಪಿ ವಕೀಲರಿಂದ**

**05.** ವಾದಿಗಳು ನನ್ನ ಹಾಗೂ 1 ಮತ್ತು 12 ನೇ ಪ್ರತಿವಾದಿಯ ಸಹೋದರಿಯರು ಎಂದರೆ ಸರಿ. ಪ್ರತಿವಾದಿ 13 ರಿಂದ 15 ರವರು 12 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಪ್ರತಿವಾದಿ 8 ನನ್ನ ಹೆಂಡತಿ ಹಾಗೂ ಪ್ರತಿವಾದಿ 9 ರಿಂದ 11 ನನ್ನ ಮಕ್ಕಳು ಎಂದರೆ ಸರಿ. ಪ್ರತಿವಾದಿ 2 ರಿಂದ 4 ರವರು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಪ್ರತಿವಾದಿ 5 ಮತ್ತು 6 ಹಾಗೂ ಪ್ರತಿವಾದಿ 16 ರಿಂದ 18 ನನ್ನ ಸಂಬಂಧಿಕರಲ್ಲ ಎಂದರೆ ಸರಿ. ನನ್ನನ್ನು ಸಾಕ್ಷಿ ಹೇಳಲು ವಾದಿಗಳು ಈ ದಿನ ಕರೆದುಕೊಂಡು ಬಂದಿರುವುದಿಲ್ಲ. ನಾನೇ ಪಕ್ಷಗಾರನಾಗಿರುವುದರಿಂದ ಬಂದಿರುತ್ತೇನೆ. ನಾನು ಈ ದಾವೆಯಲ್ಲಿ ವಕೀಲರಾದ ಟಿ.ಕೆ.ಹಿರಿಯಣ್ಣಯ್ಯ ರವರನ್ನು ಇಟ್ಟುಕೊಂಡಿದ್ದೇನೆ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರ ಹಾಕಿಲ್ಲ. ವಾದಿಗಳೇ ಹಾಕಿಕೊಂಡಿರುತ್ತಾರೆ. ವಾದಿಗಳಿಗೂ ಕೂಡ ಸದರಿ ಟಿ.ಕೆ.ಹಿರಿಯಣ್ಣಯ್ಯ ರವರೇ ವಕೀಲರು ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನನ್ನ ವಕೀಲರು ಬರೆದಿರುತ್ತಾರೆ.

**06.** ವಾದಿಗಳ ಜೊತೆ ಶಾಮೀಲಾಗಿ ನಾನು ಹಾಗೂ ಇತರರು ಈ ದಾವೆಯನ್ನು ಸಲ್ಲಿಸಿರುವುದು ಎಂದರೆ ಸಾಕ್ಷಿ ನಾನು ಹಾಕಿಲ್ಲ, ವಾದಿಗಳೆ ಹಾಕಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಮ್ಮ ಹಾಗೂ ಅವರ ಮಕ್ಕಳು ನನ್ನ ವಕೀಲರನ್ನೆ ಇಟ್ಟುಕೊಂಡಿದ್ದಾರಾ ಅಥವಾ ಬೇರೆ ವಕೀಲರನ್ನು ಇಟ್ಟುಕೊಂಡಿದ್ದಾರಾ ಎಂದು ನನಗೆ ಗೊತ್ತಿಲ್ಲ. ನಾನು, ವಾದಿಗಳು ಹಾಗೂ 12 ನೇ ಪ್ರತಿವಾದಿ ಚೆನ್ನಾಗಿದ್ದೇವೆ. ದಾವಾ ಸ್ವತ್ತುಗಳು ನನಗೆ ಗೊತ್ತು. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ನನ್ನ ಹಾಗೂ 12 ನೇ ಪ್ರತಿವಾದಿ ಹಾಗೂ ಎಲ್ಲರ ಮನೆ ಜಂಟಿ ಕುಟುಂಬದಲ್ಲೆ ಇದೆ. ನನಗೆ ಸಹಿ ಮಾಡಲು ಬರುವುದಿಲ್ಲ. ಪ್ರತಿವಾದಿ 1 ಮತ್ತು ಪ್ರತಿವಾದಿ 12 ರವರಿಗೆ ಸಹಿ ಮಾಡಲು ಬರುತ್ತದಾ ಎಂದು ನನಗೆ ಗೊತ್ತಿಲ್ಲ. ಹುಲಿತಿಮ್ಮಯ್ಯ ನನ್ನ ಚಿಕ್ಕಪ್ಪ. ಅವರು ಜೀವಂತ ಇದ್ದಾಗ ಚೆನ್ನಾಗಿದ್ದೇವು. ತಾವರೇಕೆರೆಯ ಟಿ.ಬಿ ಕರಿಬಸವಯ್ಯ ಬಿನ್ ಬಸವೆಂಕಟಪ್ಪ ರವರು ಮೃತಪಟ್ಟಿದ್ದು, ಅವರು ಜೀವಂತವಿದ್ದಾಗ ಚೆನ್ನಾಗಿದ್ದೆ. ಟಿ.ಎನ್ ಚನ್ನನರಸಿಂಹಯ್ಯ ಹಾಗೂ ಆರ್ ಕೃಷ್ಣಮೂರ್ತಿ

ರವರು  ಮೃತಪಟ್ಟಿದ್ದು, ಅವರು ಜೀವಂತವಿದ್ದಾಗ ಚೆನ್ನಾಗಿದ್ದೇವು. ಚೋಳನಾಯಕನಹಳ್ಳಿಯ ಪತ್ರ ಬರಹಗಾರರಾದ ಮುನಿಯಪ್ಪ ನವರು ನನಗೆ ಗೊತ್ತಿಲ್ಲ.

**07.** ದಿನಾಂಕ : 16.04.2008 ರಲ್ಲಿ ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಸೇರಿ ಭಾಗದಲ್ಲಿ ಬಂದ ಸ್ವತ್ತನ್ನು 18 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ : 16.04.2008 ರ ಕ್ರಯಪತ್ರದ ಜೆರಾಕ್ಸ ಪ್ರತಿಯನ್ನು ತೋರಿಸಿ ಅದರಲ್ಲಿರುವ ಪೋಟೋಗಳು ಯಾರದ್ದು ಎಂದು ಕೇಳಿದಾಗ ಸಾಕ್ಷಿ ಪೋಟೋಗಳು ನಮ್ಮದೆ ಎಂದು ಒಪ್ಪಿರುತ್ತಾರೆ. ಸಾಕ್ಷಿಗೆ ನಿ ಪಿ 3 ನ್ನು ತೋರಿಸಿ ಅದರಲ್ಲಿರುವ ಪೋಟೊ ತೋರಿಸಿದಾಗ ಸಾಕ್ಷಿ ಅದು ನನಗೆ ಗೊತ್ತಿಲ್ಲ ಹಾಗೂ ನನ್ನ ಅಣ್ಣ ಸೇರಿ ಆ ರೀತಿ ಪೋಟೋ ಸೇರಿಸಿ ಮಾಡಿರಬಹುದು ಎಂದು ನುಡಿಯುತ್ತಾರೆ. ಅದರಲ್ಲಿ ನಮ್ಮ  ಪೋಟೋ ಇದೆ. 1 ನೇ ಪ್ರತಿವಾದಿ ಹೇಳಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿ ಪಿ 3 ನಾನು ಹಾಗೂ ನನ್ನ ಹೆಂಡತಿ ಮಕ್ಕಳು ಸೇರಿ 18 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಕ್ರಯಪತ್ರ ಹಾಗೂ ನಾವೇ ಮಾಡಿಸಿರುವುದು ಎಂದರೆ ಸಾಕ್ಷಿ ಎಲ್ಲ 1 ನೇ ಪ್ರತಿವಾದಿ ಮಾಡಿಸಿರುವುದು ಎಂದು ನುಡಿಯುತ್ತಾರೆ.

**08.** ನಮ್ಮ ಊರಿನ ಸಂಜೀವಯ್ಯ ಮತ್ತು ಟಿ.ವಿ ಕೆಂಪೇಗೌಡ ಚೆನ್ನಾಗಿದ್ದಾರೆ. ಸಾಕ್ಷಿ ಪುನಃ ತಾವರೇಕೆರೆಯಲ್ಲಿ ಟಿ.ವಿ ಕೆಂಪೇಗೌಡ ಎಂಬ ಹೆಸರಿನವರು ಸುಮಾರು ಜನರು ಇದ್ದಾರೆ ಎಂದು ನುಡಿಯುತ್ತಾರೆ. ನಿ ಪಿ 3 ರಲ್ಲಿ ಹೇಳಿರುವ ಸ್ವತ್ತನ್ನು ಮಾರಾಟ ಮಾಡಿ 18 ನೇ ಪ್ರತಿವಾದಿ ರೂ. 36 ಲಕ್ಷ ವನ್ನು ನಗದಾಗಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಗಳು ಏನ್ ಕೇಸ್ ನಲ್ಲಿ ಹೇಳಿದ್ದಾರೆ ಹಾಗೂ ಏನು ದಾಖಲೆ ಹಾಜರುಪಡಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ನನಗೆ ಎಲ್ಲ ವಿಚಾರ ಗೊತ್ತು ಹಾಗೂ ಆ ರೀತಿ ಮಾರಾಟ ಮಾಡಿರುವುದರಿಂದ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸುಮ್ಮನೆ ನಿಂತಿರುತ್ತಾರೆ.

**09.** ದಿನಾಂಕ : 10.06.1987 ರಂದು ನಾನು, 1 ನೇ ಪ್ರತಿವಾದಿ ಹಾಗೂ 12 ನೇ ಪ್ರತಿವಾದಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ವಿಭಾಗ ಪತ್ರವನ್ನು ಚೋಳನಾಯಕನಹಳ್ಳಿ

ಮುನಿಯಪ್ಪ ರವರು ಬರೆದರು ಹಾಗೂ ಹುಲಿತಿಮ್ಮಯ್ಯ, ಕರಿಬಸವಯ್ಯ, ಚನ್ನನರಸಿಂಹಯ್ಯ ಹಾಗೂ ಕೃಷ್ಣಮೂರ್ತಿ ರವರು ಸಾಕ್ಷಿಯಾಗಿ ರುಜು ಮಾಡಿದ್ದಾರೆ ಎಂದರೆ ಸರಿಯಲ್ಲ. ಅದಕ್ಕೆ ನಾವು 3 ಜನ ಹೆಬ್ಬೆಟ್ಟು ಗುರುತು ಹಾಕಿದ್ದೇವೆ ಎಂದರೆ ಸಾಕ್ಷಿ ಹಾಕಿಲ್ಲ ಎಂದು ನುಡಿಯುತ್ತಾರೆ. ಆ ವಿಭಾಗ ಪತ್ರದಲ್ಲಿ ಎ ಷೆಡ್ಯೂಲ್ 1 ನೇ ಪ್ರತಿವಾದಿಗೆ, ಬಿ ಷೆಡ್ಯೂಲ್ ನನಗೆ ಹಾಗೂ ಸಿ ಷೆಡ್ಯೂಲ್ 12 ನೇ ಪ್ರತಿವಾದಿಗೆ ಹಂಚಲಾಗಿದೆ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ನಲ್ಲಿ ಸರ್ವೇ ನಂಬರ್ 166/3 ರಲ್ಲಿ 9 ಗುಂಟೆ, ಸರ್ವೇ ನಂಬರ್ 165/3 ಬಿ ಯಲ್ಲಿ 36 ಗುಂಟೆ ಹಾಗೂ ಹೌಸ್ ಲಿಸ್ಟ್ 113 ರಲ್ಲಿ ನನ್ನ ಭಾಗಕ್ಕೆ ಬಂದಿದೆ ಎಂದರೆ ಸಾಕ್ಷಿ ಯಾವುದೆ ವಿಭಾಗ ಮಾಡಿಲ್ಲ, ನನ್ನ ಅಣ್ಣ ಹೆಬ್ಬೆಟ್ಟು ಗುರುತು ಹಾಕು ಎಂದು ಹೇಳಿದ್ದಲ್ಲಿ ಹಾಕಿದ್ದೇವೆ ಎಂದು ನುಡಿಯುತ್ತಾರೆ. ಅದೇ ವಿಭಾಗದಲ್ಲಿ 12 ನೇ ಪ್ರತಿವಾದಿಗೆ ಸರ್ವೇ ನಂಬರ್ 166/3 ರಲ್ಲಿ 9 ಗುಂಟೆ, 165/3 ಬಿ ಯಲ್ಲಿ 1 ಎಕರೆ ಮತ್ತು ಹೌಸ್ ಲಿಸ್ಟ 113 ರಲ್ಲಿ ಅರ್ಧ ಭಾಗ ನೀಡಲಾಗಿದೆ ಎಂದರೆ ಸಾಕ್ಷಿ ಎಲ್ಲ ನನ್ನ ಅಣ್ಣನೇ ಮಾಡಿರುವುದು, ನಾವೇನು ಮಾಡಿಲ್ಲ ಎಂದು ನುಡಿಯುತ್ತಾರೆ. ನಾನು ಸರ್ವೇ ನಂಬರ್ 165/3 ಬಿ ಯನ್ನೆ 18 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ಎಂದರೆ ಸಾಕ್ಷಿ ಸುಮ್ಮನೆ ನಿಂತಿರುತ್ತಾರೆ. ಸಾಕ್ಷಿ ಪುನಃ ನಾವು ಮಾರಿಲ್ಲ ಎಂದು ನುಡಿಯುತ್ತಾರೆ.

**10.** ನಾನು 2008 ರಲ್ಲಿ ಆ ಕ್ರಯಪತ್ರ ನೋಂದಣಿ ಮಾಡಿಸುವಾಗ ನೋಂದಣಿ ಕಚೇರಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ನೋಂದಣಿ ಕಚೇರಿ ತಾವರೇಕೆರೆಯಲ್ಲಿ ಇದೆ ಎಂದರೆ ನಾನು ನೋಡಿಲ್ಲ. ನಿ ಪಿ 3 ನ್ನು 1 ನೇ ಪ್ರತಿವಾದಿ ಬರೆದುಕೊಟ್ಟಿರುವುದಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**